**Series RHB**

**Code No. 13**

Roll No. | | | | | | | |

Candidates must write the Code on the title page of the answer-book.

- Please check that this question paper contains **11** printed pages.
- Code number given on the right hand side of the question paper should be written on the title page of the answer-book by the candidate.
- Please check that this question paper contains **8** questions.
- **Please write down the Serial Number of the question before attempting it.**
- 15 minutes time has been allotted to read this question paper. The question paper will be distributed at 10.15 a.m. From 10.15 a.m. to 10.30 a.m., the students will read the question paper only and will not write any answer on the answer script during this period.

**SUMMATIVE ASSESSMENT – II**

# KANNADA

# ಕನ್ನಡ

*Time allowed : 3 hours* — *Maximum Marks : 80*

*ಅನುಮತಿಸಲಾದ ಸಮಯ : 3 ಗಂಟೆ* — *ಗರಿಷ್ಠ ಅಂಕಗಳು : 80*

***ಸೂಚನೆಗಳು :*** *ಈ ಪ್ರಶ್ನೆ ಪತ್ರಿಕೆಯು A, B, C ಮತ್ತು D ಎಂಬ ನಾಲ್ಕು ವಿಭಾಗಗಳನ್ನೊಳಗೊಂಡಿದೆ.*

| | |
|---|---|
| ವಿಭಾಗ A – (ವಾಚನ ಮತ್ತು ಗ್ರಹಿಕಾ ಕೌಶಲ) | : 12 ಅಂಕಗಳು |
| ವಿಭಾಗ B – (ಬರವಣಿಗೆ ಕೌಶಲ) | : 14 ಅಂಕಗಳು |
| ವಿಭಾಗ C – (ಅನ್ವಯಿಕ ವ್ಯಾಕರಣ) | : 14 ಅಂಕಗಳು |
| ವಿಭಾಗ D – (ಪಠ್ಯಗಳ ಅಧ್ಯಯನ) | : 40 ಅಂಕಗಳು |

## ವಿಭಾಗ A

## (ವಾಚನ ಮತ್ತು ಗ್ರಹಿಕಾ ಕೌಶಲ) : 12 ಅಂಕಗಳು

1. ಈ ಗದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ :

'ಅಯ್ಯೋ ನನಗೆ ವೇಳೆ ಸಾಲದು' ಎಂದು ಕೊರಗುವವರು ಬಹಳ ಮಂದಿ ಇದ್ದಾರೆ. ವೇಳೆ ಎನ್ನುವುದು ಬಂಡವಾಳ ಹೂಡಿಕೆಯಿದ್ದಂತೆ. ಯಾರು ಇರುವ ಸಮಯವನ್ನು ಸರಿಯಾಗಿ, ಸಮರ್ಪಕವಾಗಿ ನಿರ್ವಹಿಸಬಲ್ಲರೋ ಅವರು ಜೀವನವನ್ನು ಚೆನ್ನಾಗಿ ನಿರ್ವಹಿಸಬಲ್ಲರು. 'ಹೊತ್ತೇ ಮುತ್ತು' ಅಲ್ಲವೇ ? ಸಮಯ ಪ್ರಜ್ಞೆ ಇರುವವರಿಗೆ ಯಶಸ್ಸು ಕಟ್ಟಿಟ್ಟ ಬುತ್ತಿ.

ಯಾರಲ್ಲಿ ಜೀವನದ ಬಗ್ಗೆ ಸ್ಪಷ್ಟವಾದ ಗುರಿಯಿರುವುದಿಲ್ಲವೋ ಅಂತಹವರು ಸಮಯವನ್ನು ಬೇಕಾಬಿಟ್ಟಿಯಾಗಿ ಪೋಲು ಮಾಡುತ್ತಿರುತ್ತಾರೆ. ವಿದ್ಯಾರ್ಥಿಗಳು ಜೀವನದಲ್ಲಿ ಧ್ಯೇಯಗಳನ್ನು ಹೊಂದುವುದರ ಜೊತೆಗೆ ಯಾವ ಕೆಲಸಕ್ಕೆ ಆದ್ಯತೆ ನೀಡಬೇಕು ಎಂಬ ವಿವೇಕವನ್ನು ಹೊಂದಿರಬೇಕು. ಟಿ.ವಿ. ಯಲ್ಲಿ ಎಷ್ಟೇ ಒಳ್ಳೆಯ ಕಾರ್ಯಕ್ರಮಗಳು ಪ್ರಸಾರವಾಗುತ್ತಿದ್ದರೂ ಪರೀಕ್ಷೆ ಸಮಯದಲ್ಲಿ ಅವುಗಳನ್ನು ನೋಡುವುದು ಸರಿಯಲ್ಲ.

ಸಮಯದ ಅಪವ್ಯಯಕ್ಕೆ ಹೆಚ್ಚಾಗಿ ಆಲಸ್ಯವೇ ಕಾರಣವಾಗುತ್ತದೆ. ತಡವಾಗಿ ಎದ್ದು ಗಡಿಬಿಡಿಯಲ್ಲಿ ಹೊರಟು ಶಾಲೆಗೆ ಅಥವಾ ಕಾಲೇಜಿಗೆ ಓಡುವುದರಿಂದ ಉದ್ವಿಗ್ನತೆ ಹೆಚ್ಚಾಗುತ್ತದೆ. ಪರೀಕ್ಷೆಯ ಸಮಯದಲ್ಲಿ ರಾತ್ರಿ ಬಹಳ ಹೊತ್ತಿನವರೆಗೆ ಓದುವುದರಿಂದ ಬೆಳಿಗ್ಗೆ ಬೇಗ ಏಳಲಾಗದೆ ಸರಿಯಾದ ಸಮಯಕ್ಕೆ ಪರೀಕ್ಷಾ ಸ್ಥಳವನ್ನು ಸೇರಲಾಗುವುದಿಲ್ಲ. ಅಷ್ಟೇ ಅಲ್ಲ ಆ ಗಡಿಬಿಡಿಯಲ್ಲಿ ರಾತ್ರಿ ಓದಿದ್ದೆಲ್ಲಾ ಮರೆತುಹೋಗಬಹುದು. ಇದಕ್ಕೆ ಮದ್ದೆಂದರೆ ವೇಳಾಪಟ್ಟಿಯೊಂದನ್ನು ತಯಾರಿಸಿಕೊಂಡು ಅದನ್ನು ಅನುಸರಿಸುವುದು.

ಇದರಿಂದ ಯಾವ ಕೆಲಸವನ್ನು ಯಾವಾಗ, ಎಷ್ಟು ಮಾಡಬೇಕೆಂಬುದು ತಿಳಿಯುತ್ತದೆ.

**ಪ್ರಶ್ನೆಗಳು :**

(ಅ) ಯಶಸ್ಸನ್ನು ಹೇಗೆ ಪಡೆಯಬಹುದು ? *1*

(ಆ) ವಿದ್ಯಾರ್ಥಿಗಳು ಪರೀಕ್ಷೆಯ ಸಮಯದಲ್ಲಿ ತಡವಾಗಿ ಎದ್ದರೆ ಏನಾಗುತ್ತದೆ ? *2*

(ಇ) ವೇಳೆಯನ್ನು ಬಂಡವಾಳ ಹೂಡಿಕೆಗೆ ಏಕೆ ಹೋಲಿಸಿದ್ದಾರೆ ? *2*

(ಈ) ಸಮಯದ ಬಗೆಗೆ ಮೇಲಿನ ಲೇಖನದಲ್ಲಿರುವ ಗಾದೆಯ ಅರ್ಥವೇನು ? *1*

2. ಈ ಪದ್ಯಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ :

ಇಳೆಗಹಿಂಸೆಯ ಪರಮತತ್ವವನು ತೋಳೆತ್ತಿ
ಉಸಿರ ಬಲವುಳ್ಳನಕ ಸಾರಿದ ಗುರು;
ದರ್ಪವನ್ನು ಧೈರ್ಯದಲಿ, ಶಸ್ತ್ರವನು ಸಹನೆಯಲಿ
ಶಠತೆಯನು ಸತ್ಯದಲಿ ಜಯಿಸಿದ ಕಲಿ;
ಹುಡಿಯ ಹುಳುಗಳನೆತ್ತಿ ವಜ್ರಹೃದಯವ ಬಿತ್ತಿ
ವೀರ ಜನ್ಮವನಿತ್ತ ಹಿರಿಯ ತಂದೆ;
ನೆಲದ ನಡವಳಿಕೆಯಲಿ ನಾಕದೌನತ್ಯವನು
ಮೇಳವಿಸಿ ತೋರಿದ ಪವಾಡ ಪುರುಷ;
ಪ್ರೇಮ ಸಂಸ್ಥಾಪನೆಯ ವಿಶ್ವಜಿದ್ಯಜ್ಞದಲಿ
ಪ್ರಾಣ ಪೂರ್ಣಾಹುತಿಯನಿತ್ತ ದಾನಿ;
ಭಾರತದ ಭಾಗ್ಯರವಿ; ದೀನದಲಿತರ ರಕ್ಷೆ
ವಿಮಲ ಧರ್ಮದ ವಾಣಿ; ಜನತೆಯಂತ: ಸಾಕ್ಷಿ;
ಸರ್ವೋದಯದ ಸೂತ್ರಧಾರಿ ಗಾಂಧಿ !

*- ತೀ.ನಂ. ಶ್ರೀಕಂಠಯ್ಯ*

ಪ್ರಶ್ನೆಗಳು [illegible]

(ಅ) ಗಾಂಧೀಜಿಯವರು ಎಂತಹ ಕಲಿ ?

(ಆ) ಅವರು ದರ್ಪವನ್ನು ಹೇಗೆ ಜಯಿಸಿದರು ?

(ಇ) ಗಾಂಧೀಜಿಯವರು ಹುಳುಗಳಲ್ಲಿ ವಜ್ರಹೃದಯವನ್ನು ಹೇಗೆ ಬಿತ್ತಿದರು ?

(ಈ) ಅವರು ಪವಾಡ ಪುರುಷರು - ಹೇಗೆ ?

## ವಿಭಾಗ B

## (ಬರವಣಿಗೆ ಕೌಶಲ) : 14 ಅಂಕಗಳು

**II** ಕೆಳಗಿನ ಯಾವುದಾದರೂ ***ಒಂದು*** ವಿಷಯವನ್ನು ಕುರಿತು 150 ಪದಗಳಿಗೆ ಮೀರದಂತೆ ನಿಬಂಧವನ್ನು ಬರೆಯಿರಿ :

(ಅ) ಮೂಢ ನಂಬಿಕೆಗಳು

(ಆ) ಇಂದಿನ ಚಲನಚಿತ್ರಗಳು ಯುವ ಪೀಳಿಗೆಯ ಮೇಲೆ ಬೀರುತ್ತಿರುವ ಪ್ರಭಾವ

(ಇ) ಯುದ್ಧದಿಂದಾಗುವ ವಿನಾಶಗಳು

**III** ನೀವು ನಿಮ್ಮ ಊರಿನ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯೆಂದು ಭಾವಿಸಿ ಗ್ರಾಮ ಪಂಚಾಯತಿ ನಡೆಸುತ್ತಿರುವ 'ಜ್ಞಾನದರ್ಶಿನಿ' ವಾಚನಾಲಯಕ್ಕೆ ಬೇಕಾದ ಪುಸ್ತಕಗಳನ್ನು ಕಳಿಸುವಂತೆ ವಿನಂತಿಸಿ ಪ್ರಕಾಶಕರು, ಐ.ಬಿ.ಹೆಚ್. ಪ್ರಕಾಶನ, ಗದಗ - ಇವರಿಗೆ ಒಂದು ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮ ರಸ್ತೆಬದಿಯ ಒಳಚರಂಡಿ ಕಟ್ಟಿಕೊಂಡಿರುವುದನ್ನು ತಿಳಿಸಿ ಅದನ್ನು ಆದಷ್ಟು ಬೇಗ ಸರಿಪಡಿಸಬೇಕೆಂದು ಕೋರುತ್ತಾ ಆಯುಕ್ತರು ಜಲ ಮತ್ತು ಒಳಚರಂಡಿ ವಿಭಾಗ, ಬೆಂಗಳೂರು ದಕ್ಷಿಣ - ಇವರಿಗೆ ಪತ್ರವನ್ನು ಬರೆಯಿರಿ.

**IV** ನಿಮ್ಮ ಶಾಲೆಯಲ್ಲಿ ಆಚರಿಸಿದ ಮಕ್ಕಳ ದಿನಾಚರಣೆಯ ವರದಿಯನ್ನು ತಯಾರಿಸಿ.

## ವಿಭಾಗ C

## (ಅನ್ವಯಿಕ ವ್ಯಾಕರಣ) : 14 ಅಂಕಗಳು

ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ :

.. ಕೆಳಗಿನ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ : *2*

(i) ತೊಡೆಯನುಡಿದು

(ii) ಜನೈಕ್ಯ

. ಕೆಳಗಿನ ಪದಗಳನ್ನು ವಿಗ್ರಹಿಸಿ ಸಮಾಸವನ್ನು ಹೆಸರಿಸಿ : *2*

(i) ಕಾಲಜ್ಞಾನ

(ii) ಪದ್ಮನಾಭ

. ನುಡಿಗಟ್ಟು / ಪಡೆನುಡಿಯನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಉಪಯೋಗಿಸಿ ಬರೆಯಿರಿ :

‘ಮಥಿಸು’ *1*

. ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ : *1*

(i) ನಿರೀಕ್ಷಿತ

(ii) ಅವಶ್ಯಕ

. ಕೆಳಗಿನವುಗಳಿಗೆ ತತ್ಸಮ / ತದ್ಭವ ರೂಪವನ್ನು ಬರೆಯಿರಿ : *1*

(i) ಗೊಟ್ಟಿ

(ii) ಕ್ಷಣ

. ಕೆಳಗಿನ ಪದಗಳಲ್ಲಿ ಅನ್ವರ್ಥನಾಮವನ್ನು ಗುರುತಿಸಿ : *1*

(i) ಮಂಗಳೂರು

(ii) ಕಾಡು ಮೇಡು

(iii) ಜಿಪುಣ

(iv) ಅವರು

## ವಿಭಾಗ C

## (ಅನ್ವಯಿಕ ವ್ಯಾಕರಣ) : 14 ಅಂಕಗಳು

**V** ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರ ಬರೆಯಿರಿ :

1. ಕೆಳಗಿನ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ : *2*

   (i) ತೊಡೆಯನುಡಿದು

   (ii) ಜನ್ನೈಕ್ಯ

2. ಕೆಳಗಿನ ಪದಗಳನ್ನು ವಿಗ್ರಹಿಸಿ ಸಮಾಸವನ್ನು ಹೆಸರಿಸಿ : *2*

   (i) ಕಾಲಜ್ಞಾನ

   (ii) ಪದ್ಮನಾಭ

3. ನುಡಿಗಟ್ಟು / ಪಡೆನುಡಿಯನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಉಪಯೋಗಿಸಿ ಬರೆಯಿರಿ :

   'ಮಥಿಸು' *1*

4. ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ : *1*

   (i) ನಿರೀಕ್ಷಿತ

   (ii) ಅವಶ್ಯಕ

5. ಕೆಳಗಿನವುಗಳಿಗೆ ತತ್ಸಮ / ತದ್ಭವ ರೂಪವನ್ನು ಬರೆಯಿರಿ : *1*

   (i) ಗೊಟ್ಟಿ

   (ii) ಕ್ಷಣ

6. ಕೆಳಗಿನ ಪದಗಳಲ್ಲಿ ಅನ್ವರ್ಥನಾಮವನ್ನು ಗುರುತಿಸಿ : *1*

   (i) ಮಂಗಳೂರು

   (ii) ಕಾಡು ಮೇಡು

   (iii) ಜಿಪುಣ

   (iv) ಅವರು

7. ಕೆಳಗಿನ ಪದಗಳಿಗೆ ಸಮಾನಾರ್ಥಕ ಪದವನ್ನು ಬರೆಯಿರಿ :

(i) ಅಂಧ

(ii) ಸ್ಮಿತ

8. ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ :

(i) ಬಂದನು - ಭೂತಕಾಲ, ಬರುವಳು -

(ii) ಬಾವಿಯಂ - ದ್ವಿತೀಯ ವಿಭಕ್ತಿ, ಧರೆಯೊಳ್ -

9. "ನಾನೆಂದೂ ಶಾಲೆಗೆ ತಡವಾಗಿ <u>ಹೋಗೆನು</u>." — ಈ ವಾಕ್ಯದಲ್ಲಿ ಗೆರೆ ಎಳೆದ ಪದ :

(i) ನಿಷೇಧಾರ್ಥಕ ಕ್ರಿಯಾಪದ

(ii) ಸಂಭವನಾರ್ಥಕ ಕ್ರಿಯಾಪದ

(iii) ಗುಣವಾಚಕ

(iv) ತದ್ಧಿತಾಂತ

10. ಕೆಳಗಿನ ಪದಗಳಿಗೆ ಜೋಡು ನುಡಿಯನ್ನು ಬರೆಯಿರಿ :

(i) ಹಬ್ಬ

(ii) ನೂಕು

11. ಕೆಳಗಿನ ಯಾವುದಾದರೂ ಒಂದು ಗಾದೆಯನ್ನು ವಿವರಿಸಿ :

(i) ಕೂಡಿ ಬಾಳಿದರೆ ಸ್ವರ್ಗ

(ii) ಮಿಂಚಿ ಹೋದ ಕಾರ್ಯಕ್ಕೆ ಚಿಂತಿಸಿ ಫಲವಿಲ್ಲ

## ವಿಭಾಗ D

## (ಪಠ್ಯಗಳ ಅಧ್ಯಯನ) : 40 ಅಂಕಗಳು

**VI** ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ನಾಲ್ಕು ಉತ್ತರಗಳನ್ನು ಕೊಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ : *14*

1. ಹಳಗನ್ನಡ ಸಂಸ್ಕೃತಮಯವಾಗಿದ್ದು ಜನಸಾಮಾನ್ಯರಿಗೆ ಅದು _______ ಆಯಿತು.
   - (i) ನೆಲಗಡಲೆ
   - (ii) ಕಬ್ಬಿಣದ ಕಡಲೆ
   - (iii) ಕಾಬುಲ್ ಕಡಲೆ
   - (iv) ಹುರಿಗಡಲೆ

2. ಮಾರಣ ಹೋಮ ಎಂದರೆ :
   - (i) ಮರಣ ಸಮಯದಲ್ಲಿ ಮಾಡುವ ಹೋಮ
   - (ii) ಜನರ ಒಳತಿಗಾಗಿ ಮಾಡುವ ಹೋಮ
   - (iii) ಜನರನ್ನು ಭೀಕರವಾಗಿ ಕೊಲ್ಲುವುದು
   - (iv) ದಿಗ್ವಿಜಯ ಪಡೆದಾಗ ಮಾಡುವ ಹೋಮ

3. ಸಂಕಲ್ಪ ಪಾಠದ ಲೇಖಕ ಇವರು :
   - (i) ಎಂ.ಆರ್. ಶ್ರೀನಿವಾಸ ಮೂರ್ತಿ
   - (ii) ಸೇಡಿಯಾಪು ಕೃಷ್ಣಭಟ್ಟ
   - (iii) ಪ್ರಭು ಶಂಕರ
   - (iv) ಅರವಿಂದ ಮಾಲಗತ್ತಿ

4. ಮಾಣಿಕ್ಯಂ ಅವರು ಒಬ್ಬ :
   - (i) ಜಿಲ್ಲಾಧಿಕಾರಿ
   - (ii) ಸಾಹಿತಿ
   - (iii) ವಾಸ್ತು ಶಿಲ್ಪಿ
   - (iv) ಪೋಲಿಸ್ ಅಧಿಕಾರಿ

5. ಅಮಾತ್ಯನು ಕೊನೆಯಲ್ಲಿ ಚಂದನದಾಸನನ್ನು ಬಿಡಿಸಲು ಹೀಗೆ ಹೋಗಲು ನಿರ್ಧರಿಸಿದನು :

(i) ಖಡ್ಗಪಾಣಿಯಾಗಿ

(ii) ಖಡ್ಗಧಾರಿಯಾಗಿ

(iii) ಖಡ್ಗರಹಿತನಾಗಿ

(iv) ಕವಚಧಾರಿಯಾಗಿ

6. ಸಿಂಹವು ಕಾಡಿನಲ್ಲಿ ಮೊದಲು ತಿಂದು ಹಾಕಿದ ಪ್ರಾಣಿಗಳು ಇವು :

(i) ಜಿಂಕೆಗಳು

(ii) ಶಶಕಗಳು

(iii) ಹಸುಗಳು

(iv) ಸಾಮಜಗಳು

7. ಸ್ಮಿತ ಇರಬೇಕಾದುದು ಇಲ್ಲಿ :

(i) ಕಿವಿಯಲ್ಲಿ

(ii) ವದನದಲ್ಲಿ

(iii) ವಚನದಲ್ಲಿ

(iv) ಕಾಯದಲ್ಲಿ

8. ಜೀವವಿದ್ದರೂ ಮೃತನಂತಿರುವವನು :

(i) ಪರನಿಂದಕನು

(ii) ಮದಾಂಧನು

(iii) ಅಪ್ರಾಮಾಣಿಕನು

(iv) ಅನುವರದಿಂದ ಹಿಂದೆ ಸರಿದವನು

9. ಮಗುವಿನ ಕಣ್ಣಿನ ನೋಟ ಈ ರೀತಿ ಹೊಳೆಯುತ್ತಿದೆ :

(i) ಚಿನ್ನದಂತೆ

(ii) ಕನ್ನಡಿಯಂತೆ

(iii) ಶಿವನ ಕೈಯಲಗಿನಂತೆ

(iv) ಶಿವನ ಮೂರನೇ ಕಣ್ಣಿನಂತೆ

10. ಉಲುಹು ಅಡಗಿರುವುದು :

(i) ವಾಯುವಿನಲ್ಲಿ

(ii) ಪತಂಗದಲ್ಲಿ

(iii) ಅಲರಿನಲ್ಲಿ

(iv) ಶಶಿಯಲ್ಲಿ

11. ಕಳಿಂಗ ರಾಜನನ್ನು ಕೊಂದವನು :

(i) ಕೃಷ್ಣ

(ii) ಭೀಮ

(iii) ಕಂಸ

(iv) ದುರ್ಯೋಧನ

12. ಸಾಧುಂಗೆ ಸಾಧು, ಮಾಧುರ್ಯಂಗೆ ಮಾಧುರ್ಯಂ ಎಂದಿರುವುದು :

(i) ಕಪ್ಪೆ ಅರಭಟ್ಟನ ಶಾಸನದಲ್ಲಿ

(ii) ಲಕ್ಷ್ಮೀಧರಾಮಾತ್ಯನ ಶಾಸನದಲ್ಲಿ

(iii) ಹಲ್ಮಿಡಿ ಶಾಸನದಲ್ಲಿ

(iv) ಪಂಪನ ಆದಿಪುರಾಣದಲ್ಲಿ

13. ಅಜಗಣ್ಣ ಮುಕ್ತಾಯಕ್ಕನ :

(i) ಸಹೋದರ

(ii) ತಂದೆ

(iii) ಚಿಕ್ಕಪ್ಪ

(iv) ಸೋದರ ಮಾವ

14. ಮೇಷ್ಟ್ರ ಹೆಂಡತಿ ಸತ್ತದ್ದು ಈ ಕಾರಣದಿಂದ :

(i) ಪ್ಲೇಗಿನಿಂದ

(ii) ಜ್ವರದಿಂದ

(iii) ಕಾಲರಾದಿಂದ

(iv) ಉಬ್ಬಸದಿಂದ

**VII** ಕೆಳಗಿನ ಪ್ರಶ್ನೆಗಳಿಗೆ 5 – 6 ವಾಕ್ಯಗಳಲ್ಲಿ ಉತ್ತರ ಬರೆಯಿರಿ : *3×6*

1. ಲಿಪಿಯ ಮೂಲಕ ಜ್ಞಾನ ಭಂಡಾರ ಹೇಗೆ ಭದ್ರವಾಯಿತು ?

2. ಮಂಜಪ್ಪ ಮತ್ತು ಗುಮಾಸ್ತರ ಸಂಭಾಷಣೆಯಲ್ಲಿ ಅಪಾಲಜಿ ಪ್ರಸಂಗವನ್ನು ತಿಳಿಸಿ.

3. ಸಂದರ್ಭದೊಂದಿಗೆ ವಿವರಿಸಿ :

"ಹೆಂಡತಿ ಸತ್ತಾಗ ಇಷ್ಟು ಸಂಕಟ ಆಗಲಿಲ್ಲ."

**ಅಥವಾ**

"ಲೋಕಾಪವಾದಕ್ಕೆ ಅಂಜದೆ ನಡೆದವನಲ್ಲ."

4. ನಕುಲಾದಿ ಭೀಮರಿಗೆ ದುರ್ಗತಿ ಒದಗಿದ ಪ್ರಸಂಗವನ್ನು ವಿವರಿಸಿ.

5. ನಗುವಿನ ಬಗ್ಗೆ ಡಿ.ವಿ.ಜಿ. ಯವರು 'ನಿರ್ಮಲ ಚಿತ್ತ' ಕವಿತೆಯಲ್ಲಿ ಏನು ಹೇಳಿದ್ದಾರೆ ?

6. ಸಂದರ್ಭದೊಂದಿಗೆ ವಿವರಿಸಿ :

"ಬಿಸಿಲೀನ ಬೇಗೆ ಸುಡಲಿಲ್ಲ."

**ಅಥವಾ**

"ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್."

VIII ಕೆಳಗಿನ ಪ್ರಶ್ನೆಗಳಿಗೆ 8 – 10 ವಾಕ್ಯಗಳಲ್ಲಿ ಉತ್ತರ ಬರೆಯಿರಿ : *4×2=8*

1. "ಕೋಪಾತುರನಪ್ಪನಾವನುಂ ಬಲ್ಲಪನೆ ?" — ಈ ಮಾತು ಸಿಂಹಕ್ಕೆ ಹೇಗೆ ಅನ್ವಯಿಸುತ್ತದೆ ವಿವರಿಸಿ.

**ಅಥವಾ**

ಅಂಗುಲಿಮಾಲನ ಮನಸ್ಸು ಪರಿವರ್ತನೆಗೊಂಡ ಬಗೆಯನ್ನು ವಿವರಿಸಿ.

*18*

2. ಅಕ್ಕನ ವಚನದಲ್ಲಿ ಏಕತಾಭಾವ ಹೇಗೆ ವ್ಯಕ್ತವಾಗಿದೆ ?

**ಅಥವಾ**

ಭೀಮ, ದುರ್ಯೋಧನರು ಹೊಡೆದಾಡಿದ ರೀತಿ ಹಾಗೂ ಅದರ ಪರಿಣಾಮವನ್ನು ವಿವರಿಸಿ.